# ಡಿವಿಜಿಯವರನ್ನು ಸತ್ಕರಿಸಿದ ಸೌಭಾಗ್ಯ

**ಖ್ಯಾತ ಕವಿ ಡಿವಿಜಿ ಅವರ ಮಂಕುತಿಮ್ಮನ ಕಗ್ಗಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ 1967ರಲ್ಲಿ ಲಭಿಸಿದಾಗ ಅವರನ್ನು ಸತ್ಕರಿಸುವ ಸೌಭಾಗ್ಯ ನಮ್ಮದಾಯಿತು. ಅವರೊಂದಿಗಿನ ಒಡನಾಟ ಮನದಾಳದಲ್ಲಿ ಹಸಿರಾಗಿ ನಿಂತಿದೆ.**

**■ ಎನ್. ಆನಂದ ರಾಮರಾವ್, ಬೆಂಗಳೂರು**



ನೆನಪುಗಳು ಯಾವಾಗಲೂ ಮಧುರ. ಅವು ಹಳೆಯದಾದರಂತೂ ಮಧುರಾತಿಮಧುರ. ಅದನ್ನು ನೆನಪಿಸಿಕೊಳ್ಳುವುದರಲ್ಲಿ ಸಿಗುವ ಭಾವನೆಗಳು ಆನಂದಗಳನ್ನು ಹೇಳಿಕೊಳ್ಳುವುದರಲ್ಲಿ, ಬರೆಯುವುದರಲ್ಲಿ ಸಿಗುವ ಸಾಫಲ್ಯವನ್ನು ಅನುಭವಿಸಿಯೇ ತೀರಬೇಕು.

ಪದವಿ ಮುಗಿಸಿದ ನಂತರ ಬೆಂಗಳೂರಿನ ಪ್ರತಿಷ್ಠಿತ ಸಾರ್ವಜನಿಕ ಉದ್ದಿಮೆಯಾದ ಭಾರತ್ ಎಲೆಕ್ಟ್ರಾನಿಕ್ಸ್ ಸಂಸ್ಥೆಗೆ ಉದ್ಯೋಗಕ್ಕೆ ಸೇರಿದೆ. ಅದು 1963 ರಲ್ಲಿ. ಈ ಸಂಸ್ಥೆಯಲ್ಲಿ ಹಲವಾರು ಕನ್ನಡ ಸಾಹಿತ್ಯಾಭಿಮಾನಿಗಳು ಸೇರಿಕೊಂಡು ಕಾರ್ಮಿಕರಲ್ಲಿ ಅಡಗಿದ್ದ ಸಾಹಿತ್ಯಾಭಿರುಚಿ ಹಾಗೂ ನಾಟಕಾಸಕ್ತಿಯನ್ನು ಪ್ರೋತ್ಸಾಹಿಸುವ ಸಲುವಾಗಿ ಕನ್ನಡ ಸಾಹಿತ್ಯ ಕೂಟವೆಂಬ ಸಂಸ್ಥೆಯನ್ನು ಅದಾಗಲೇ ಸ್ಥಾಪಿಸಿದ್ದರು. ನಾನೂ ಸಹ ಆ ಕೂಟದ ಸದಸ್ಯನಾಗಿ ಕ್ರಿಯಾತ್ಮಕವಾಗಿ ತೊಡಗಿಸಿಕೊಂಡೆ.

ಕಾರ್ಮಿಕರೇ ಬರೆದ ಕತೆ ಕವನಗಳನ್ನು ಪ್ರಕಟಿಸಿ ಕಾರ್ಮಿಕರ ಸಾಹಿತ್ಯಾಭಿರುಚಿಯನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಪ್ರತಿವರ್ಷವೂ ಯುಗಾದಿ ಸಂದರ್ಭದಲ್ಲಿ 'ಸಾಹಿತ್ಯಮಾಲೆ' ಎಂಬ ಸಾಹಿತ್ಯ ಸಂಚಿಕೆಯನ್ನು ಪ್ರಕಟಿಸಲಾಗುತ್ತಿತ್ತು. ಅನಂತರ 1965 ರಿಂದ ಆಯಾ ವರ್ಷದ ಕೇಂದ್ರ ಸಾಹಿತ್ಯ ಅಕಾಡಮಿಯಿಂದ ಪ್ರಶಸ್ತಿ ಪಡೆದ ಕನ್ನಡ ಸಾಹಿತಿಗಳನ್ನು ಸಾಹಿತ್ಯ ಕೂಟಕ್ಕೆ ಆಹ್ವಾನಿಸಿ ಅವರಿಗೆ ಸನ್ಮಾನ ಪತ್ರವನ್ನು ಅರ್ಪಿಸಿ ಅವರನ್ನು ಗೌರವಿಸುವ ಸಂಪ್ರದಾಯವನ್ನು ಆರಂಭಿಸಲಾಯಿತು. ಮೊದಲಿಗೆ ನಮ್ಮ ಕೂಟದ ಈ ಪ್ರಶಸ್ತಿಗೆ ಭಾಜನರಾದವರು ಎಸ್.ವಿ. ರಂಗಣ್ಣನವರು. ಅವರ ಕೃತಿ 'ರಂಗಬಿನ್ನಪ'ಕ್ಕೆ 1965ರಲ್ಲಿ ಅಕಾಡಮಿ ಪ್ರಶಸ್ತಿ ದೊರಕಿದಾಗ ಅಂದು ಆರಂಭವಾದ ಈ ಸತ್ಸಂಪ್ರದಾಯ ಇಂದಿಗೂ ಮುಂದುವರೆದುಕೊಂಡು ಬರುತ್ತಿರುವುದು ಸಾಹಿತ್ಯ ಕೂಟದ ಹೆಮ್ಮೆಯ ಸಂಗತಿಯಾಗಿದೆ.

ಶ್ರೇಷ್ಠ ವಿದ್ವಾಂಸರು, ವಿಮರ್ಶಕರಿಂದ 'ಆಚಾರ್ಯ ಕೃತಿ' ಎಂದೇ ಪರಿಗಣಿತವಾಗಿರುವ ಡಿ.ವಿ.ಜಿ. ಯವರ ದೀರ್ಘಕಾಲದ ಗೀತಾ ಅಧ್ಯಯನದ ಹಾಗೂ ಚಿಂತನೆಯ ಫಲವಾದ ಅವರ 'ಶ್ರೀಭಗವದ್‌ಗೀತಾ ತಾತ್ಪರ್ಯ' ಗ್ರಂಥಕ್ಕೆ 1967ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ದೊರಕಿತು.

ಡಿ.ವಿ.ಜಿ. ಯವರ ಮಹಾನ್ ಕೃತಿ ಹಾಗೂ ಜನಪ್ರಿಯ ಕೃತಿ 'ಮಂಕುತಿಮ್ಮನ ಕಗ್ಗ'. ಬಹುಶಃ ಈ ಕೃತಿಯನ್ನು ಓದದೇ ಇರುವ ಕನ್ನಡದ ಓದುಗರು ವಿರಳವೇ ಎನ್ನಬಹುದು. 1943 ರಲ್ಲಿ ಪ್ರಕಟವಾದ ಈ ಕೃತಿ ಕನ್ನಡದ ಭಗವದ್ಗೀತೆ ಎಂದೇ ಪ್ರಸಿದ್ಧವಾಗಿದೆ. ಈವರೆಗೆ ಹಲವಾರು ಮರು ಮುದ್ರಣಗಳನ್ನು ಕಂಡಿದೆ. ನಾಲ್ಕು ಸಾಲುಗಳುಳ್ಳ 945 ಪದ್ಯಗಳಲ್ಲಿ ಪ್ರಸ್ತಾಪವಾಗದೇ ಇರುವ ವಿಷಯಗಳೇ ಇಲ್ಲವೆಂದು ಹೇಳಬಹುದು. ನೀತಿಬೋಧನೆ, ಸತ್ಯಶೋಧನೆ, ಹಾಸ್ಯ ವ್ಯಂಗ್ಯ ವಿಡಂಬನೆ ಎಲ್ಲವೂ ಇವೆ. ಈ ಪುಸ್ತಕವನ್ನು ವಿಶ್ವಕೋಶ, ಜ್ಞಾನಭಂಡಾರವೆಂದು ಹೇಳಬಹುದು.

ಭಾರತೀಯ ಜ್ಞಾನಪೀಠ ಪ್ರಶಸ್ತಿಗೆ ಅತ್ಯಂತ ಸೂಕ್ತವಾದ ಕೃತಿಯೇ ಆಗಿದ್ದರೂ ಕಾರಣಾಂತರಗಳಿಂದ ಅದು ಈ ಕೃತಿಗೆ ದಕ್ಕಲಿಲ್ಲ. ಆದರೆ ಪ್ರಶಸ್ತಿ ಪುರಸ್ಕಾರಗಳಿಗೆ ಯಾವತ್ತೂ ತಲೆಕೆಡಿಸಿಕೊಳ್ಳದೆ ಸ್ಥಿತಪ್ರಜ್ಞರಂತಿದ್ದ ಡಿವಿಜಿ ಅವರು ಎಂದಿಗೂ ಬೇಸರಪಟ್ಟುಕೊಳ್ಳಲೇ ಇಲ್ಲ. ಆದರೇನಂತೆ ಹಲವಾರು ಇತರೇ ಪ್ರಶಸ್ತಿ ಪುರಸ್ಕಾರಗಳು ಇವರನ್ನು ಅರಸಿ ಬಂದವು. 1961ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಗೌರವ ಡಿ.ಲಿಟ್ ಪ್ರಶಸ್ತಿ ದೊರಕಿತು. (ಅಂದಿನ ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಜಯಚಾಮರಾಜೇಂದ್ರ ಒಡೆಯರ್ ಅವರು ಉಪಸ್ಥಿತರಿದ್ದ ಈ ಘಟಿಕೋತ್ಸವದಲ್ಲಿ ಭಾಗವಹಿಸಿ ಪದವಿ ಪಡೆಯುವ ಸುಯೋಗವೂ ನನ್ನದಾಗಿತ್ತು). 'ಪ್ರಜಾಮತ' ಪತ್ರಿಕೆಯಲ್ಲಿ ಪ್ರಕಟವಾದ ಡಿ.ವಿ. ಜಿ. ಯವರ ಲೇಖನಮಾಲೆ 'ಶ್ರೀಭಗವದ್‌ಗೀತಾ ತಾತ್ಪರ್ಯ' ಗ್ರಂಥಕ್ಕೆ 1967ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ದೊರಕಿತು.

ಕೇಂದ್ರ ಸಾಹಿತ್ಯ ಅಕಾಡಮಿಯ ಪ್ರಶಸ್ತಿ ದೊರಕಿದಾಗ ಸಾಹಿತ್ಯ ಕೂಟದ ಸಂಪ್ರದಾಯದಂತೆ ಡಿ.ವಿ.ಜಿ. ಯವರನ್ನು ನಮ್ಮಲ್ಲಿಗೆ ಆಹ್ವಾನಿಸಿ ಅವರನ್ನು ಗೌರವಿಸುವ ಅವಕಾಶವೂ ನಮಗೆ ದೊರಕಿತು. (ನಮ್ಮ ಸಾಹಿತ್ಯ ಕೂಟದ ಸಾಹಿತ್ಯ ಮಾಲೆಯ ಮೊದಲ ಸಂಚಿಕೆಯನ್ನು ಬಿಡುಗಡೆ ಮಾಡಿ ಶುಭವನ್ನು ಹಾರೈಸಿದ್ದವರೂ ಡಿ.ವಿ. ಜಿ. ಯವರೇ) ಸಮಾರಂಭಕ್ಕೆ ಬರುವುದಾಗಿ ಹೇಳಿದ್ದರೂ ಕೆಲವು ಅನಿವಾರ್ಯ ಕಾರಣ ಗಳಿಂದ ಅಂದಿನ ಕಾರ್ಯಕ್ರಮಕ್ಕೆ ಅವರು ಬರಲಾಗಲಿಲ್ಲ. ಹಾಗಾಗಿ ಕೂಟದ ಎಲ್ಲರಿಗೂ ನಿರಾಶೆಯುಂಟಾಯಿತು. ಆದರೆ ಅವರನ್ನು ಸಂಪರ್ಕಿಸಿ ಗೋಖಲೆ ಸಾರ್ವಜನಿಕ ಸಂಸ್ಥೆಗೆ ನಾವೇ ಬಂದು ಅವರನ್ನು ಸನ್ಮಾನಿಸುವುದಾಗಿ ಹೇಳಿದಾಗ ಅವರು ಸಂತೋಷದಿಂದ ಒಪ್ಪಿಗೆ ಸೂಚಿಸಿದರು.

ಒಂದು ಭಾನುವಾರ ಬೆಳಿಗ್ಗೆ ನಮ್ಮ ಭಾರತ್ ಎಲೆಕ್ಟ್ರಾನಿಕ್ಸ್ ಸಂಸ್ಥೆಯ ಹಿರಿಯ ಅಧಿಕಾರಿಗಳೂ ಹಾಗೂ ಸಾಹಿತ್ಯ ಕೂಟದ ಅಧ್ಯಕ್ಷರೂ ಆಗಿದ್ದ ಎಚ್.ಆರ್. ಬಾಪೂ ಸೀತಾರಾಂ (ನಾಡಿನ ಹಿರಿಯ ಗಾಯಕಿಯಾದ ಎಚ್.ಆರ್. ಲೀಲಾವತಿಯವರ ಸಹೋದರರು) ಅವರೊಂದಿಗೆ ಕಾರ್ಯಕಾರೀ ಸಮಿತಿಯವರೂ ಹಾಗೂ ಕೆಲವು ಸಾಹಿತ್ಯಾಸಕ್ತ ಸದಸ್ಯರೂ ಗೋಖಲೆ ಸಾರ್ವಜನಿಕ ಸಂಸ್ಥೆಗೇ ಹೋಗಿ ಅವರನ್ನು ಸನ್ಮಾನಿಸಿದೆವು. ನಮ್ಮೆಲ್ಲರನ್ನು ಆತ್ಮೀಯತೆಯಿಂದ ಸ್ವಾಗತಿಸಿ ಹಿತನುಡಿಗಳನ್ನಾಡಿ ಬೇಲದ ಹಣ್ಣಿನ ಪಾನಕದಿಂದ ಎಲ್ಲರನ್ನೂ ಸತ್ಕರಿಸಿದ್ದು ನನ್ನ ನೆನಪಿನಲ್ಲಿ ಎಂದೆಂದಿಗೂ ಮರೆಯಲಾಗದ ಘಟನೆಯಾಗಿ ಉಳಿದಿದೆ. ■